ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ-

ಸಾಕ್ಷಿದಾರರ ಆಧಾರ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-44 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಿಂದಃ-

ನಾನು ಎಸ್.ಎಸ್.ಎಲ್.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿರುತ್ತಾರಾ ಎಂದರೆ ಸಾಕ್ಷಿ ಎನ್ ಹನುಮಯ್ಯನವರು ಹೇಳಿ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರವನ್ನು ಕನ್ನಡದಲ್ಲಿ ಬರೆಸಲಾಗಿರುತ್ತದೆ. ವಾದಿ ನಂಜಪ್ಪ ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿರವ ಎಲ್ಲಾ ಅಂಶಗಳು ನನಗೆ ಗೊತ್ತಿರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸನ್ನು 79 ಎಂದು ಸರಿಯಾಗಿಯೇ ತೋರಿಸಲಾಗಿರುತ್ತದೆ.

ಪ್ರಶ್ನೆಃ ಸಾಕ್ಷಿಗೆ ಈ ದಿನ ನ್ಯಾಯಾಲಯಕ್ಕೆ ಏನು ಹೇಳಲು ಬಂದಿರುತ್ತೀರಾ ಎಂದರೆ?
ಉತ್ತರಃ ಸಾಕ್ಷಿ ಸಾಕ್ಷಿ ಈ ದಿನ ಸಾಕ್ಷಿ ನುಡಿಯಲು ಬಂದಿರುತ್ತೇನೆ.

ಪ್ರಶ್ನೆಃ ಈ ದಿನ ಏನು ಸಾಕ್ಷಿ ನುಡಿಯಲು ಬಂದಿರುತ್ತೀರಾ ಎಂದರೆ?
ಉತ್ತರಃ ನಮ್ಮ ತಂದೆ ಸಾಕ್ಷಿ ಸಹಿ ಮಾಡಿದ ದಾಖಲೆಗೆ ನಮ್ಮ

ತಂದೆಯವರೇ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ಹೇಳಲು ಬಂದಿರುತ್ತದೆ.

ಸಾಕ್ಷಿಗೆ ನಿಮ್ಮ ತಂದೆಯವರು ಯಾವ ವರ್ಷದಲ್ಲಿ ಪಂಚಾಯಿತಿ ಪಾರಿಕತ್ತಿನಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಪಂಚಾಯಿತಿ ಪಾರಿಕತ್ತನ್ನು ನೋಡಿದರೆ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ಬದುಕಿದ್ದ ಸಮಯದಲ್ಲಿ ವಿಭಾಗ ಪತ್ರದಲ್ಲಿ ಸಹಿ ಮಾಡಿರುವ ಬಗ್ಗೆ ನನಗೆ ತಿಳಿಸಿರುವುದಿಲ್ಲ. ನಮ್ಮ ತಂದೆಯ ಹೆಸರು ಕೆಂಚಪ್ಪ, ನನ್ನ ತಾತ ಹೆಸರು ತಿಮ್ಮೇಗೌಡ. ನಿಮ್ಮ ತಂದೆಯ ಸಹಿಯನ್ನು ಟಿ ಕೆಂಚಪ್ಪ ಮಾಜಿ ಛೇರ್ಮೆನ್ ಅಕ್ಕೂರು ಎಂದು ಮಾಡುತ್ತಿದ್ದರು. ಟಿ ಕೆಂಚಪ್ಪ ಮಾಜಿ ಛೇರ್ಮೆನ್ ಅಕ್ಕೂರು ಎಂದು ಸಹಿ ಮಾಡಿರುವ ಯಾವುದಾದರೂ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-39 ರ ಪಂಚಾಯಿತಿ ಪಾರಿಕತ್ತಿನಲ್ಲಿ ನಮ್ಮ ತಂದೆಯರು ಟಿ ಕೆಂಚಪ್ಪ ಅಕ್ಕೂರು ಎಂದು ಸಹಿ ಮಾಡಿರುತ್ತಾರೆ. ಸಾಕ್ಷಿಗೆ ನಿಮ್ಮ ತಂದೆಯವರು ಟಿ ಕೆಂಚಪ್ಪ ಅಕ್ಕೂರೂ ಎಂದು ಮತ್ತು ಟಿ ಕೆಂಚಪ್ಪ ಮಾಜಿ ಛೇರ್ಮೆನ್ ಅಕ್ಕೂರು ಎಂದು ಸಹಿ ಮಾಡುತ್ತಾರೆ ಈ ಎರಡು ಸಹಿಗಳಲ್ಲಿ ಯಾವುದು ಸರಿ ಎಂದರೆ ಸಾಕ್ಷಿ ಟಿ ಕೆಂಚಪ್ಪ ಅಕ್ಕೂರು ಎಂದು ಸಹಿ ಮಾಡಿರುವುದು ಸರಿ. ನಮ್ಮ ತಂದೆಯವರು ಸಹಿ ಮಾಡವಾಗ ಅವರು ಟಿ ಕೆಂಚಪ್ಪ ಎಂದು ಸಹಿ ಮಾಡುತ್ತಾರೆ. ನಮ್ಮ ತಂದೆಯವರು ನಿಪಿ-39 ಟಿ ಕೆಂಚಪ್ಪ ಎಂದು ಸಹಿ ಮಾಡಿಲ್ಲದೇ ಇದ್ದರೂ ಸಹ ನಂಜಪ್ಪನವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.